

ಎಡದಿಂದ ಬಲಕ್ಕೆ :
1. ಅವನು ಅನುಭವಿಸುತ್ತಿರುವುದು ತಪ್ಪು ಮಾಡಿದ ನಂತರದ ಬಿಸಿ (4)
3. ಕನ್ನ ಕೊರೆದವನು ಜೈಲಿಗೆ ಹೋಗಲೇಬೇಕೆಂಬುದು ನಿಯಮ (3)
4. ಕೇಶವನ್ನು ಕಚ್ಚಿ ಹಿಡಿದದ್ದು ನಾಯಿ ತಾನೆ ? (3)
6. ಕಲಾವಿದರ ಕೃತಿಗಳಲ್ಲೂ ಹಲವು ಬಗೆ (4)
7. ತಿಳಿಯದ್ದನ್ನು ಕಲಿವ ಕೆಲಸಕ್ಕೆ ಎಳ್ಳು ನೀರು (4)
9. ಮೊಸರು ಮಾರುವಾಕೆಯ ಧ್ವನಿ ಎಷ್ಟು ಇಂಪು ! (4)
12. ಭಾರೀ ಮರವನ್ನೇರುವ ಆಸೆ ಕೊನೆಗೂ ಕೈಗೂಡಿತು (4)
14. ಬಕ ಬಕ ತಿನ್ನಲು ಬಂದ ಉದ್ದ ಬಾಹುಗಳ ರಕ್ಕಸ (3)
15. ಮನೆ ಕಟ್ಟಬೇಕೆಂಬುದು ಆಕೆಯ ಬಹುಕಾಲದ ಆಸೆ (3)
16. ವಟ ವೃಕ್ಷದ ಪರ್ಣಗಳ ಬಣ್ಣದ ಚಿತ್ರ (4)

ಮೇಲಿಂದ ಕೆಳಕ್ಕೆ :
1. ಬಂಧನದಿಂದ ಮುಕ್ತಗೊಳಿಸಿದವನ ಜೊತೆ ಗಾಢ ಸ್ನೇಹ (4)
2. ಪ್ರತಿ ಪಶುವನ್ನೂ ರಕ್ಷಿಸುವ ಒಡೆಯ ಈಶ್ವರ ತಾನೇ ? (4)
3. ಫಲಕ ಹಿಡಿದು ನಿಂತಿರುವವನ ಕೈಯಲ್ಲೊಂದು ತಲೆಬುರುಡೆ (3)
5. ಪರಮಾಣು ಕಣದ ಮೂಲ ಕಲ್ಪನೆ ನೀಡಿದ ಪ್ರಾಚೀನ ಭಾರತದ ದಾರ್ಶನಿಕ (3)
6. ಕೆರೆಗೆ ಕಸ ಎಸೆದವರ ಕಡೆ ನೋಡು, ಕೋಪದಿಂದ ದುರುಗುಟ್ಟು (4)
8. 'ಕಪ್ಪು ಜಲ' ಎಂಬಂತೆ ಕಡಲಾಚೆ ಕಳುಹುವ ಶಿಕ್ಷೆ (4)
10. ಮುಸುಕು ತೆರೆದೊಡನೆ ಗೋಚರಿಸಿದ್ದು ತಲೆ (3)
11. ದೇವರ ಮನೆಯಲ್ಲಿರುವ ವಿಗ್ರಹ ಲಕ್ಷ್ಮೀಪತಿ ವಿಷ್ಣು (4)
12. ಆ ಊರಲ್ಲಿ ಕಟ್ಟೆಯನ್ನೇರಿ ಬರುವ ನದೀ ಪ್ರವಾಹದ್ದೇ ತೊಂದರೆ (4)
13. ಒದಿನ ಕೆಲಸ ನಿಂತುಹೋಯಿತೆಂದು ಭಾರೀ ನೋವು (3)

## 30-3-2017ರ ಉತ್ತರಗಳು

ಎಡದಿಂದ ಬಲಕ್ಕೆ :
1. ಅಕ್ರಮ 3. ವಿಲಾಸ 4. ಹನನ 6. ಅತಿಶಯ 7. ಕೊನೆಗಾಲ 9. ನವ್ಯಕಾವ್ಯ 11. ಸರಂಜಾಮು 15. ಕರಾರು 16. ರಜನಿ 17. ಹುರುಳು

ಮೇಲಿಂದ ಕೆಳಕ್ಕೆ :
1. ಅಸಲು 2. ಮಹತ್ವ 3. ವಿನಾಶ 5. ನಮೂನೆ 6. ಅಧೀನ 8. ಲಗಾಮು 10. ಕಾರ್ಮಿಕ 12. ರಂಜನಿ 13. ಅರುಹು 14. ಕೊರಳು

# ಟರಾಂಟ್ಯುಲಾ ಎಂಬ ಜೇಡ

ಟರಾಂಟ್ಯುಲಾ ಅದೊಂದು ವಿಧದ ಜೇಡ. ಭಾರೀ ಗಾತ್ರದ, ಭಯಾನಕ ರೂಪದ, ಕುಟುಕುವ ಸ್ವಭಾವದ, ವಿಷಕರವೂ ಆದ ಈ ಜೇಡ ಹಾಗೆಲ್ಲ ಆಗಿದ್ದೂ ನಾಯಿ ಬೆಕ್ಕುಗಳಂತೆ ಮುದ್ದಿನ ಪ್ರಾಣಿ ಕೂಡ ಆಗಿರುವುದು ಅದರ ಒಂದು ವಿಸ್ಮಯ ವಿಶೇಷ.

ಟರಾಂಟ್ಯುಲಾದ ಭಯಾನಕ ರೂಪಕ್ಕೆ ಮೊದಲ ಕಾರಣ ಅದರ ಬೃಹತ್ ಗಾತ್ರ. ಎಂಟೂ ಕಾಲುಗಳನ್ನು ಅಗಲಿಸಿ ಕುಳಿತ ಟರಾಂಟ್ಯುಲಾ 'ಊಟದ ತಟ್ಟೆ' ಯಷ್ಟು ವಿಸ್ತಾರಕ್ಕೆ ಹರಡಿಕೊಳ್ಳುತ್ತದೆ (ಚಿತ್ರ 1). ಹಾಗೆ ಸಮೀಪ ಒಂದು ಅಡಿ ಅಗಲಕ್ಕೆ ಅರಳಬಲ್ಲ ಈ ಜೇಡ ಸರಾಸರಿ 85 ಗ್ರಾಂ ತೂಗುತ್ತದೆ; ಗರಿಷ್ಠ 170 ಗ್ರಾಂ ಮುಟ್ಟಿರುವ ದಾಖಲೆಯೂ ಇದೆ. ಹಾಗೆಂದು ಟರಾಂಟ್ಯುಲಾ ಜೇಡದ ಎಲ್ಲ ಪ್ರಭೇದಗಳದೂ ಇದೇ ಗಾತ್ರ ಅಲ್ಲ. ನಾಲ್ಕು ಅಂಗುಲದಿಂದ ಆರಂಭಿಸಿ ಹನ್ನೆರಡು ಅಂಗುಲ ಅಡ್ಡಗಲ ತಲುಪುವ, 'ಅತ್ಯಂತ ದೈತ್ಯ ಜೇಡ' ಎಂಬ ವಿಶ್ವ ದಾಖಲೆಯ 'ಗೋಲಿಯತ್ ಬರ್ಡ್ ಈಟರ್' ಪ್ರಭೇದದವರೆಗೆ ಟರಾಂಟ್ಯುಲಾ ಗಳಲ್ಲಿ ವಿಭಿನ್ನ ಗಾತ್ರಗಳ, ತೂಕಗಳ ಸಮೀಪ 900 ಪ್ರಭೇದಗಳಿವೆ.

ಟರಾಂಟ್ಯುಲಾದ ಭೀಕರ ಸ್ವರೂಪಕ್ಕೆ ಎರಡನೆಯ ಮುಖ್ಯ ಕಾರಣ ಅದರ ಶರೀರದ ರೋಮರಾಶಿ. ಇಡೀ ಮೈಯನ್ನು, ಕಾಲುಗಳನ್ನೂ ದಟ್ಟವಾಗಿ ಆವರಿಸಿ ಬೆಳೆವ ಈ ಕೂದಲುಗಳಿಂದ ಟರಾಂಟ್ಯುಲಾಗಳದು ವಿಧ ವಿಧ ವರ್ಣಗಳ ಬಾಹ್ಯ ರೂಪ; ಕಪ್ಪು, ಗಾಢ ಕಂದು ಮತ್ತು ಪಟ್ಟೆ ಪಟ್ಟೆ ಸ್ವರೂಪ (ಚಿತ್ರಗಳಲ್ಲಿ ಗಮನಿಸಿ). ಹೆಣ್ಣು ಟರಾಂಟ್ಯುಲಾಗಳದು ಸರಾಸರಿ 30 ವರ್ಷ ಆಯುಷ್ಯ; ಗಂಡುಗಳದು ಏಳೇ ವರ್ಷ!

ಸಮಭಾಜಕದ ಆಸುಪಾಸಿನಲ್ಲಿ ಎಲ್ಲ ಭೂ ಖಂಡಗಳ ಪ್ರಧಾನವಾಗಿ ದಕ್ಷಿಣ ಅಮೆರಿಕದ ಎಲ್ಲ ನೆಲ ಜೀವಾವಾರಗಳಲ್ಲೂ ಟರಾಂಟ್ಯುಲಾ ಗಳದು ವಾಸ್ತವ್ಯ. ಈ ಜೇಡಗಳದು ಬಹುವಾಗಿ ನೆಲವಾಸ, ನಿಶಾಚರ ಬದುಕು. ನೆಲದಲ್ಲಿ ಬಿಲ ತೋಡಿ ಅದರ ಒಳಭಾಗದಲ್ಲಿಡೀ ಒಂದು ರೇಶ್ಮೆ ಪದರ ರಚಿಸುವುದು ಅವುಗಳ ನಿವಾಸ ನಿರ್ಮಾಣ ಕ್ರಮ. ವೃಕ್ಷವಾಸಿಗಳಾಗಿರುವ ಕೆಲವೇ ಪ್ರಭೇದಗಳು ಕಾಂಡದ ಮೇಲೊಂದು ರೇಶ್ಮೆ ಚೀಲ ನಿರ್ಮಿಸಿ ಅದರೊಳಗೆ ವಾಸಿಸುತ್ತವೆ (ಚಿತ್ರ 3). ಟರಾಂಟ್ಯುಲಾಗಳು ಬಲೆ ನಿರ್ಮಿಸಿ



ಬೇಟೆಯಾಡುವುದಿಲ್ಲ; ಅವಿತು, ಹೊಂಚು ಹಾಕಿ ಕುಳಿತು, ಸಮೀಪ ಬಂದ ಬಲಿಗಳ ಮೇಲೆರಗಿ, ವಿಷ ಚುಚ್ಚಿ ಅವುಗಳ ಅಂಗಾಂಗಗಳನ್ನು ಕರಗಿಸಿ ಹೀರುತ್ತವೆ. ಭಾರೀ ಗಾತ್ರದ ಟರಾಂಟ್ಯುಲಾ ಪ್ರಭೇದಗಳು ಕೀಟಗಳನ್ನಷ್ಟೇ ಅಲ್ಲದೆ ಹಲ್ಲಿ, ಕಪ್ಪೆ (ಚಿತ್ರ 2), ಹಕ್ಕಿ ಮತ್ತು ಪುಟ್ಟ ಸರ್ಪಗಳನ್ನೂ ಹಿಡಿಯುತ್ತವೆ. ಟರಾಂಟ್ಯುಲಾಗಳು ವಿಷ ಜೀವಿಗಳಾಗಿದ್ದರೂ ಅವುಗಳ ವಿಷ ಜೇನ್ನೊಣದ ವಿಷದಷ್ಟೇ ತೀಕ್ಷ್ಣ. ಹಾಗಾಗಿ ಈ ಜೇಡಗಳು ಮನುಷ್ಯರಿಗೆ ಅಪಾಯಕಾರಿ ಅಲ್ಲ.

ಮುದ್ದಿನ ಪ್ರಾಣಿಗಳಾಗಿಯೂ ಜನಪ್ರಿಯವಾಗಿರುವ ಟರಾಂಟ್ಯುಲಾಗಳು ಕೆಲವು ದೇಶಗಳಲ್ಲಿ, ವಿಶೇಷವಾಗಿ ದಕ್ಷಿಣ ಅಮೆರಿಕದ ವೆನಿಝೂಯೆಲಾ ಮತ್ತು ಏಷಿಯದ ಕಾಂಬೋಡಿಯಾಗಳಲ್ಲಿ ಅಷ್ಟೇ ಜನಪ್ರಿಯ ಆಹಾರ ಕೂಡ ಆಗಿವೆ. ಆ ಪ್ರದೇಶಗಳಲ್ಲಿ ಈ ಜೇಡಗಳನ್ನು ಕೆಂಡಗಳ ಮೇಲೆ ಹಾಕಿ ಹುರಿದು ತಿನ್ನುವ ಪರಿಪಾಠ ವ್ಯಾಪಕವಾಗಿದೆ !

■ ಎನ್. ವಾಸುದೇವ್